1. ಪ್ರಕಟಣೆ :

ಸಂವಿಧಾನದಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಪ್ರಮಾಣ ಸ್ವೀಕರಿಸುವ ಬಗ್ಗೆ ಹಂಗಾಮಿ ಅಧ್ಯಕ್ಷರು : ಮಾನ್ಯ ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸುವುದಕ್ಕಿಂತ ಮೊದಲು ಕೆಲವೊಂದು ವಿಷಯವನ್ನು ನಾನು ಸದನಕ್ಕೆ ಹೇಳಬಯಸುತ್ತಿದ್ದೇನೆ. 14ನೇ ವಿಧಾನಸಭೆ ನೂತನ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ನಿನ್ನೆ ಸಂವಿಧಾನದ 188ನೇ ಅನುಚ್ಛೇದದ ರೀತ್ಯಾ ಪ್ರಮಾಣ ವಚನವನ್ನು ಸ್ವೀಕರಿಸುವಾಗ ಸಂವಿಧಾನದ ಅನುಸೂಚಿ–3ರಲ್ಲಿ ನಿಗದಿಪಡಿಸಿರುವ ನಮೂನೆಯ ರೀತ್ಯಾ ಪ್ರಮಾಣ ವಚನವನ್ನು ಸ್ವೀಕರಿಸುವುದಿಲ್ಲವೆಂದು ಆಕ್ಷೇಪ ಮಾಡಿದ್ದರು. ಆದುದರಿಂದ ಅಂತಹ ಸದಸ್ಯರು ಪುನಃ ಪ್ರಮಾಣ ವಚನವನ್ನು ಸ್ವೀಕರಿಸಬೇಕೆಂದು ಅದಕ್ಕೆ ಆದೇಶ ನೀಡಬೇಕೆಂದು ಕೋರಿದ್ದಾರೆ. ನಾನು ಅದನ್ನೆಲ್ಲ ಪರಿಶೀಲಿಸಿ ನೋಡಿದಾಗ ಈಗಾಗಲೇ ನಾನು ಪ್ರಾರಂಭಿಕ ಸಭೆಯಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಸಂವಿಧಾನದಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಬೇಕೆಂದು ಕೋರಿದ್ದೇನೆ. ಆದರೂ ಕೆಲವು ಸದಸ್ಯರು ನಮೂನೆಯಲ್ಲಿ ಇರುವುದರೊಂದಿಗೆ ಬೇರೆಯವರ ಹೆಸರನ್ನು ಕೂಡ ಸೇರಿಸಿ ಪ್ರಮಾಣ ವಚನವನ್ನು, ಪ್ರತಿಜ್ಞಾ ವಚನವನ್ನು ಸ್ವೀಕರಿಸಿರುವುದನ್ನು ಕೂಡ ನಾನು ಗಮನಿಸಿದ್ದೇನೆ. ಸಂವಿಧಾನಬದ್ಧವಾಗಿ ಪ್ರಮಾಣ ವಚನವನ್ನು ಸ್ವೀಕರಿಸದಿದ್ದಲ್ಲಿ ಸಂವಿಧಾನದ ಆಶಯಕ್ಕೆ ಧಕ್ಕೆ ಉಂಟಾಗುವ ಸಂಭವವಿರುವುದರಿಂದ ಎಲ್ಲಾ ಮಾನ್ಯ ಸದಸ್ಯರು ಸಂವಿಧಾನದಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಪ್ರಮಾಣವಚನವನ್ನು ಸ್ವೀಕರಿಸಬೇಕೆಂದು ಸೂಚಿಸಿದ್ದೇನೆ. ಇವತ್ತು ಕೂಡ ಬಹಳ ಕಟ್ಟುನಿಟ್ಟಾಗಿ ಈ ನಿಯಮವನ್ನು ಪಾಲಿಸಬೇಕೆಂದು ನಾನು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಈ ಮೂಲಕ ಆದೇಶ ಮಾಡುತ್ತಿದ್ದೇನೆ. ಈಗ ನಮ್ಮ ಕಾರ್ಯದರ್ಶಿಯವರು ಪ್ರಮಾಣ ವಚನ ಕಾರ್ಯಕ್ರಮವನ್ನು ಮುಂದುವರೆಸುತ್ತಾರೆ.

ಶ್ರೀ ಬಿ.ಸುರೇಶ್‌ಗೌಡ : ಮಾನ್ಯ ಸದಸ್ಯರು ನಿನ್ನೆ ಬೇರೆಯವರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ.

ಹಂಗಾಮಿ ಅಧ್ಯಕ್ಷರು : ಬೇರೆಯವರು ಸಂವಿಧಾನದ ಪ್ರಕಾರವಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ಆದರೆ additional ಆಗಿ ಸೇರ್ಪಡೆ ಮಾಡಿರುವುದು ಸರಿಯಲ್ಲ ಸಂವಿಧಾನಬದ್ಧವಾಗಿ ಅದಕ್ಕೆ ಅವಕಾಶವಿಲ್ಲವೆಂದು ಈಗಾಗಲೇ ನಾನು ಹೇಳಿದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಅದನ್ನು ಮೊದಲು ಕಡತದಿಂದ ತೆಗೆಸಿ.

ಅಧ್ಯಕ್ಷರು : ಕಡತದ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.

ಶ್ರೀ ಆರ್.ಅಶೋಕ : ತಾವು ಇಲ್ಲವೆಂದು ಹೇಳಿದ ನಂತರ ಅದನ್ನು ಕಡತದಿಂದಲಾದರೂ ತೆಗೆಸಬೇಕು. ಇಲ್ಲವಾದಲ್ಲಿ ತಮ್ಮ – ನಲ್ಲಿ ಅದು ತಪ್ಪು ಎಂದಾದರೂ ಹೇಳಬೇಕು.

ಅಧ್ಯಕ್ಷರು : ಇದು ಕಡತದಲ್ಲಿ ಬಂದಿಲ್ಲ. ಯಾವಾಗಲೂ ಕೂಡ ಪ್ರಮಾಣವಚನ ಕಡತದಲ್ಲಿ ಬರುವುದಿಲ್ಲ. ಕೇವಲ ಇಷ್ಟು ಜನ ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆಂದು ಬರುತ್ತದೆ. ಎಲ್ಲಾ ಸದಸ್ಯರು ಸಂವಿಧಾನ ಬದ್ಧವಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ವೈಯುಕ್ತಿಕವಾಗಿ ಏನು additional ಆಗಿ ಹೇಳಿದ್ದಾರೆಯೋ ಅದು ಸರಿಯಲ್ಲ, ಮುಂದೆ ಆ ರೀತಿ ಮಾಡಬೇಡಿ ಎಂದು ಹೇಳಿದ್ದೇನೆ.

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಈಗ ಪ್ರಮಾಣ ವಚನ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು. ಪ್ರಥಮವಾಗಿ ಮಾನ್ಯ ಶ್ರೀ ಶಾಮನೂರು ಶಿವಶಂಕರಪ್ಪ ನವರು ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆ.

2. ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ.

ಚುನಾಯಿತರಾದ ಈ ಕೆಳಕಂಡ ಸದಸ್ಯರು ಭಗವಂತನ ಹೆಸರಿನ ಮೇಲೆ / ಸತ್ಯ ನಿಷ್ಠೆಯ ಹೆಸರಿನ ಮೇಲೆ ಪ್ರಮಾಣವಚನ ಸ್ವೀಕರಿಸಿದರು.

ಮಾನ್ಯ ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಶ್ಯಾಮನೂರು ಶಿನಶಂಕರಪ್ಪ	ದಾವಣಗೆರೆ ದಕ್ಷಿಣ	ಕನ್ನಡ
ಶ್ರೀ ಆರ್. ಅಖಿಂಡ ಶ್ರೀನಿವಾಸಮೂರ್ತಿ	ಪುಲಕೇಶಿ ನಗರ	ಕನ್ನಡ
ಶ್ರೀ ಅಮೀನಪ್ಪ ಗೌಡ ಶಂಕನಗೌಡ ಪಾಟೀಲ್	ದೇವರಹಿಪ್ಪರಗಿ	ಕನ್ನಡ
ಶ್ರೀ ಅನೀಲ್ ಲಾಡ್	ಬಳ್ಳಾರಿ ನಗರ	ಕನ್ನಡ
ಶ್ರೀ ಅರವಿಂದಲಿಂಬಾವಳಿ	ಮಹದೇವಪುರ	ಕನ್ನಡ
ಶ್ರೀ ಆರ್.ಅಶೋಕ್	ಪದ್ಮನಾಭನಗರ	ಕನ್ನಡ
ಶ್ರೀ ಭೀಮಾನಾಯ್ಕ್ ಎಲ್.ಬಿ.ಪಿ.	ಹಗರಿಬೊಮ್ಮನಹಳ್ಳಿ	ಕನ್ನಡ
ಎನ್. ಚೆಲುವರಾಯ ಸ್ವಾಮಿ	ನಾಗಮಂಡಲ	ಕನ್ನಡ